RegdNo B G155

(143) 2

3-8-1965

ಸತ್ಯವಾದಿ

48th Year
Satyavadi
DAILY
MYSORE 4

ಸಂಸ್ಥಾಪಕರು – ಅವಧಾನೇಂಸಂಸ್ಥೇಪಾಠಾರ್ ಎಂ ವಿ ಸುಬ್ಬರಾಯುರು

ಸಂಪಾದಕರು – ಧರ್ಮಪ್ರಚಾರನಿರತ ಎಂ ಎಸ್ ಕೃಷ್ಣರಾವ್

2ನೇ ಪುಟ

ದಿವ್ಯ ವಾಣಿ

ಕೋಪವು ಎಂದೂ ಕಾರಣವಿಲ್ಲದೇ ಇಲ್ಲ ; ಆದರೆ ಸರಿಯಾದ ಕಾರಣವಿಲ್ಲವು ದು ಅಷ್ಟರೂಪ. — ಬೆಜಿನ.ಕ್ ಫ್ರಾಂಕ್ಲಿನ್

★

ಪೌರಸಭೆ

ಮೈಸೂರು— ಕಳೆದ ಪೌರಸಭೆಯು ವಿಾಟುಂಗಿನಲ್ಲಿ ಕಾಂಗ್ರೆಸ್ಸು ವಕ್ತು ವಿರೋಧ ಪಕ್ಷದವತು, ಬಹುಂಗ ವಾಸ್ತು ಕಟ್ಟೆಯಲ್ಲಿ ಅಕ್ಕಿ ಬೆಲೆ ಕಿಲೋಗೆ ರೂ 1-20 ವಸ್ತ 1-40 ಇರುವದು ಬಗ್ಗೆ ತಂಬಾ ಕಳವಳ ವ್ಯಕ್ತಪಡಿಸಲಾಯಿತು : ಅಹಾರ ಕಾರ್ಪೋರೇಷನ್ ಕನಸ್ಟ್ರಿವರ್ಸ್ ಸೊಸೈಟಿ ಮತ್ತು ಫೇರ್ ಪ್ರೈಸ ಡಿಪೋಗಳಿಗೂ ಸರಿಯಾಗಿ ಸರಬರಾಜು ಮಾಡುತ್ತಿಲ್ಲವೆಂದು ಆಪಾದಿಸಲಾಯಿತು. ಏಮುತ್ತಿರುವ ಬೆಲೆಯನ್ನು ಕ್ಷಿಪ್ರದಲ್ಲಿ ತಗ್ಗಿಸಿ ಡಿಪೋಗಳಿಗೆ ಅಕ್ಕಿ ಸರಬರಾಜು ಮಾಡಲು ಸರ್ಕಾರವನ್ನು ಒತ್ತಾಯಪಡಿಸಲಾಯಿತು ; ಇದು ಸರಕಾರದಿಂದ ಸಾಧ್ಯವಾಗದಿದ್ದರೆ ದಸರಾ ನಡೆಸಕ್ಕೂಡದೆಂದು ಹೇಳಲಾಯಿತು.

★

ಸಾವಿರ ಕೋಟಿ ಪ್ರೋತಾಹ

ನವದೆಹಲಿ— 21500 ಕೋಟಿ ರೂಗಳ ರಫ್ತೇಕೆಂದಿರುವ 4 ನೇ ಯೋಜನೆಯಲ್ಲಿ ರೂ 1000 ಕೋಟಿ ಪ್ರೋತಾಹ ಮೊಡವ ಯೋಜನೆಯಿದೆ

●

ಪಂಜಾಬು ರಾಜ್ಯದಲ್ಲಿ 3 ಲಕ್ಷಕ್ಕೆ ಹೆಚ್ಚು ಜನರಿರುವ ನಗರದಲ್ಲಿ ಶಾಸನಬದ್ಧ ರೇಷನಿಂಗು ಬರುವ ಜನವರಿಯಿಂದ ಜಾರಿಗೆ ಬರಲಿದೆ

★

ನಾಳೆಯ ಪಂಚಾಂಗ

ದೈವಜ್ಞ ಶಿರೋಮಣಿ
ಆಸ್ಥಾನವಿದ್ವಾನ್ ಧರ್ಮಾಧಿಕಾರಿ
ರಾಜಕಾರ್ಯಾಸಕ್ತ, ಜ್ಯೋತಿರ್ವಿದ್ವನ್ಮಣಿ
ಸಂಪತ್ಕೃಷ್ಣಜೋಯಿ ಸಂವರಿಂದ

4 ಬುಧವಾರ ಅಷ್ಟಮಿ ಸ್ವಾತಿ

ಮೈಸೂರು ನೀತಿ

ಬೆಂಗಳೂರು— ಮುಖ್ಯ ಮಂತ್ರಿ ನಿಜಲಿಂಗಪ್ಪನವರು ಡೆಲ್ಲಿಗೆ ತಾ|| 5 ರಂದು ಹೋಗುವರು, ಜಿಲ್ಲೆಯಲ್ಲಿ ಜಕ್ತಿ ಮಾತ್ರಿಗಳೂ ಹೋಗುವ ಸಂಭವವಿದೆ; ಕೇಂದ್ರ ಮಂತ್ರಿಗಳೊಡನೆ ಮೈಸೂರಿನಲ್ಲಿ ರೇಷನಿಂಗು ತೆಗೆವ ಮತ್ತು ಇತರ ವಿಷಯಗಳ ಬಗ್ಗೆ ವಿಚಾರವಾದ ಚರ್ಚೆ ನಡೆಸುವರು

❀

ಗಂಗಾ ಹಾವಳಿ

ಪಾಕವೆ— ಗಂಗಾನದಿಯು ಪೊಕಾವೆ ಪಟ್ಟಣದ ಉತ್ತರ ಭಾಗವನ್ನು ಅಕ್ರಮಿಸಿತ್ತಿದೆ

★

ದಸ್ಯಗಿರಿಗಳು

ಗಾಂಗಟಾಕ— ಭೂತಾನು ರಾಜರ ಕೊಲೆ ಪ್ರಯತ್ನ ಸಂಬಂಧವಾಗಿ 12 ಜನರು ದಸ್ಯಗಿರಿ ಮಾಡಲ್ಪಟ್ಟಿದ್ದಾರೆ

❀

ಪ್ರವಾಹ ಅನಾಹುತ

ಮುದುಗೆರೆ— ಕಾಲ್ಲೋಕಿನಲ್ಲಿ 15 ದಿನಗಳಿಂದ ವಿಪರೀತ ಮಳೆಯಾಗಿ ಎಂಡು ಕೆರೆಗಳು ಒಡೆದು, ಒಬ್ಬ ಹುಡುಗಿ ಸತ್ತು ಹಲವಾರು ದನಕರುಗಳು ಕೊಚ್ಚಿ ಹೋಗಿವೆ

★

ಎಂದು ಕಮ್ಯುನಿಸ್ಟರು

ಮದರಾಸು— ರಾಜ್ಯದ ಹಲವು ಕಡೆಗಳಲ್ಲಿ ಮೊನ್ನೆ 105 ಮಂದಿಯು ಬಂಧನವಾಗಿದೆ.

●

ಉದ್ಯಾನ ಪಂಡಿತ

ನವದೆಹಲಿ— ವೃದ್ಧ ರೈತ ಸಧೀರ ಕ್ರಿಷ್ಣಿಗೆ ಉದ್ಯಾನ ಪಂಡಿತ ಎಂಬ ಪ್ರಶಸ್ತಿ ಕೊಡಲಾಗಿದೆ : ಉತ್ತಮ ಮಾವಿನ ತೋಟಕ್ಕಾಗಿ : ರೂ 55000 ಸರ್ಕಾರಿ ಪತ್ರಗಳು ಬಹುಮಾನವಾಗಿ ದೊರೆಯುವುದು.

ರಾಜಗಳು ರೂ. 101 ಕೋಟಿ ಸಾಲ ಎತ್ತುವವು

ನವದೆಹಲಿ— 1965-66 ನೇ ವರ್ಷಕ್ಕೆ ರಾಜ್ಯಗಳು ಮಾರುಕಟ್ಟೆಯಲ್ಲಿ 101 ಕೋಟಿ ರೂಗಳ ಸಾಲವ ಎತ್ತುವ ಕಾರ್ಯಕ್ರಮ ಹೊಂದಿವೆ – ಇದಕ್ಕೆ ಶೇ ಏದೂವರೆ ಬಡ್ಡಿಯಿದ್ದು 17 ವರ್ಷಗಳ ನಂತರ ಪಾವತಿ ಮಾಡಲಾಗುತ್ತೆ — ಸದಲಗಳು ಚಾಲ್ತಿಗೆ ಅಗಸ್ಟು 23 ರಲ್ಲಿ ತೆರೆಯಲಾಗುವುದು.

❀

ಗೌರ್ನರ್‌ಗಿರಿ ಕಾಣ.ವರು

ನಂಜನಗೂಡು— 8 ತಿಂಗಳಿಂದ ಪೇವರ್ಸ ದೊರೆಯದಿರುವ 12 ಮಂದಿ ಗೌರ್ನರ್ಸ್ನ ಕಾಣಲು ನಿರ್ಧರಿಸಿರುವರು

★

ಪಂಬಳ ಹೆಚ್ಚಿಸಲು

ನಂಜನಗೂಡು— ಶ್ರೀಕಂಠೇಶ್ವರ ಸ್ವಾಮಿ-ದೇವಾಲಯದ ನೌಕರರಿಗೆ ಪಂಬಳ ಹೆಚ್ಚಿಸಲು ಒತ್ತಾಯ ಮಾಡಲಾಗಿದೆ

★

ದೇವಾಲಯ ಅಪೀಲು ವಜಾ

ಬೆಂಗಳೂರು— ಎಸ್ ಜಿ ಓ ಸಂಸ್ಥೆದ ಅಧ್ಯಕ್ಷೆ ಮಿಸ್ ವೇರಿ ದೇವಾಲಯದ ಕಮ್ಮಟಸ್ಥ ಪೂಕಾರಿ ಕೆಲಸದಿಂದ ವಜಾ ಮಾಡಿರುವ ಬಗ್ಗೆ ಮಂತ್ರಿಮಂತ್ರಿಗಳಿಗೆ ಮಾಡಿಕೊಂಡಿದ್ದ ಅಪೀಲು ತಿರಸ್ಕೃತ ಗೊಂಡಿರುವುದೆಂದು ತಿಳಿಯಾಗಿದೆ

❀

ಪಶ್ಚಿಮವಾಹಿನಿ ಸ್ಪೇಷಲ್

ಶ್ರೀರಂಗಪಟ್ಟಣ— ಪಶ್ಚಿಮವಾಹಿನಿ ರೈಲ್ವೇ ಸ್ಪೇಷಲ್ಲನ್ನು ಮುಚ್ಚಬಾರದೆಂದು ಮಂಡ್ಯಾ ಡಿಸ್ಟ್ರೇಕ್ಟ್ ಕೌನ್ಸಿಲ್ ಕೋರಿ ವಿಶೇಷ ನಿರ್ಣಯ ಮೊನ್ನಿನ ಪೌರ ಸಭೆಯ ಅಧಿವೇಶನದಲ್ಲಿ ಮಂಜೂರಾಯಿತು

★

ಪ್ರಸಿದ್ಧ ತಮಿಳು ಕಾದಲನ್ನು ಚೀನೀ ಭಾಷೆಗೆ ಪರಿವರ್ತಿಸಲಾಗುವುದು

—0—

ಉಪದೇಶ ಊರಿಗೆ

ಉಪದೇಶ ಊರಿಗೆ ಅಥವ ವರರಿಗೆ ಉಪದೇಶಿಸಲಿಕ್ಕಾಗಿಯೇ ಇದೆಯೆಂದು ಕಾಣುತ್ತದೆ : ಕಾಂಗ್ರೆಸು ಚರಿತ್ರೆಯಂತೂ ಅದಕ್ಕೆ ಸ್ಪಷ್ಟ ಉದಾಹರಣೆಯಂತಿದೆ ; ಈ ಪದ್ಧತಿಯಂಗಾಗಿಯೇ ಗಾದೆ ಉಂಟಾಗಿದೆಯೋ ಏನೊ ?

ಚುನಾವಣೆಗೆ ಅಭ್ಯರ್ಥಿಗಳಾಗಿ ನಿಲ್ಲಲು ಕೆಲವು ಮಂತ್ರಿಗಳನ್ನು ಕಾಂಗ್ರೆಸ್ಸು ಪಕ್ಷವು ಮುಂದಿಡಲು ಯೋಚಿಸಿಕೊಂಡಿತು ; ಎಂದು ಸಲಕ್ಕಿಂತಲೂ ಹೆಚ್ಚು ಬಾರಿ ಯಾರೂ ಚುನಾವಣಾ ಕಣಕ್ಕಿಳಿಯಬಾರದೆಂದು ಶ್ರೀ ನೀಲಂ ಸಂಜೀವರೆಡ್ಡಿಯವರು ಸಲಹೆಯನ್ನಿತ್ತರು ; ಸಲಹೆ ಪ್ರಯೋಗಕ್ಕೆ ಬಂಲೇಯಲ್ಲದಾದರೂ ಕಾಮರಾಜ ಸೂತ್ರವೆಂಬ ಹೊಸರೂಪವನ್ನು ತಾಳಿತು : ಆ ಸೂತ್ರವು ಹಟವಾರು ಅತಿ ವೃದ್ಧ-ಮಹಾ ಥರನ್ನು ಸಿಂಹಾಸನದಿಂದ ಕೆಳಗಿಳಿಸಿತು ; ಆದರೂ ಕೆಲವು ತಪ್ಪಿಸಿಕೊಂಡರು . ಈ ಸೂತ್ರವನ್ನು ಮುಂದಿಟ್ಟವರು ತಾವೇ ಆ ಸೂತ್ರಕ್ಕೆ ಬೆಲೆಯನ್ನೀಯುತ್ತಿದ್ದಾರೆಯೆ ?

ಹೈದರಾಬಾದಿನಲ್ಲಿ ಕಾಂಗ್ರೆಸಿಗರು ಒಂದು ತೀರ್ಮಾನಕ್ಕೆ ಬಂದರು— ಒಂದು ಸಲ ಅಧ್ಯಕ್ಷತೆಯನ್ನೇರಿದ ಕಾಂಗ್ರೆಸಿಗ ಒಡನೆ ಮುಂದಿನ ವರ್ಷವೂ ಆ ಸ್ಥಾನಕ್ಕಾಗಿ ಚುನಾವಣಾ ರಣಕ್ಕಿಳಿದು ಬಾರದು ; ಮಂತ್ರಿ, ಸಂಸತ್ ಹಾಗೂ ವಿಧಾನಸಭೆ ವಿಷಯ ಪುಷ್ಪಕ್ಕಿನ ಸದಸ್ಯರಿಗೆ 'ಬೇಡಿ' ಹಾಕಿದಂತೆ ಕಾಂಗ್ರೆಸ್ಸಿನ ಅಧ್ಯಕ್ಷರಿಗೂ ಇದೊಂದು ಜೇಡಿ ; ಅದು ಕಾಂಗ್ರೆಸಿನ ಅಧ್ಯಕ್ಷರಿಗೆ ಮಾತ್ರ ಸೀಮಿತವಾಗಿರದೆ ಪಕ್ಷದ ಎಲ್ಲಾ ಮುಂಡಾಳುಗಳಿಗೂ ಸಂಬಂಧಪಟ್ಟದ್ದಿದೆ

ಶ್ರೀ ಮುರಾರ್ಜಿ ದೇಸಾಯಿಯವರು ಮುಂತಾದವರು ಶ್ರೀ ಕಾಮರಾಜರೇ ಪುನಃ ಕಾಂಗ್ರೆಸ್ಸಿನ ಅಧ್ಯಕ್ಷರಾಗುವುದು ಸರಿಯಲ್ಲವೆಂದು ಸೂಚಿಸಿದರು ; ಅದಕ್ಕೆ ಕಾರಣ ಹೈದರಾಬಾದಿನ ತೀರ್ಮಾನವಿದೆ ; ತೀರ್ಮಾನದ ಪ್ರಕಾರ ಶ್ರೀ ಕಾಮರಾಜರು ಪುನಃ ಅಧ್ಯಕ್ಷ ಗದ್ದುಗೆಯತ್ತ ದೃಷ್ಟಿ ಹಾಯಿಸಬಾರದು.

ಅಧ್ಯಕ್ಷ ಗದ್ದುಗೆಗೆ ಪುನಃ ತನ್ನ ಹೆಸರು ಕೇಳಿಬರಲಾರಂಭವಾದಾಗ ಕಾಮರಾಜ ಸೂತ್ರವನ್ನು ಒಳಕೆಗೆ ತಂದ ಹಾಗೂ ಹೈದರಾಬಾದಿನ ತೀರ್ಮಾನಕ್ಕೆ ಒಪ್ಪಿರುವ ಕಾಂಗ್ರೆಸ್ಸಿನ ಅಧ್ಯಕ್ಷ ಕಾಮರಾಜರು ಅದು ಸರಿಯಲ್ಲವೆಂದು ಪಕ್ಷದವರಿಗೆ ಬುದ್ಧಿ ಹೇಳಬೇಕಾಗಿತ್ತು : ಶ್ರೀ ಮುರಾರ್ಜಿ ದೇಸಾಯಿ ಮುಂತಾದವರ ವಿರೋಧಾಭಿಪ್ರಾಯವನ್ನು ವ್ಯಕ್ತಪಡಿಸಿದನೇ ಅಲ್ಲದೆ ಅವರು ಜಾಗರೂಕತೆ ವಹಿಸಿಕೊಳ್ಳಬೇಕಾಗಿತ್ತು ; ಅದೂ ಇಲ್ಲ : ಕಾಂಗ್ರೆಸ್ಸಿನ ಕಾರ್ಯಕಾರಿ ಸಮಿತಿಯು ತೀರ್ಮಾನಗಳನ್ನು ಸ್ವತಃ ಅದೇ ಅಧ್ಯಕ್ಷರ ಕಡೆಬಟ್ಟೆಗೆ ಎಸೆಯಲಾರಂಭಿಸಿದರೆಂದರೆ ಇತರರಂತಾಡೇನು ? ಹತ್ತು ವರ್ಷ ಅಂತಹ ಹತ್ತು ವರ್ಷಗಳಾದರೂ ಅವರು ಅಧಿಕಾರದ ಸಿಂಹಾಸನಕ್ಕೆ ತಾಗಿಕೊಂಡಿರಲು ವ್ಯಯಿಸಿಸವದಲ್ಲಿ ಸಂದೇಹವೇನೂ ಇಲ್ಲ.

ಉಪದೇಶ ಇರುವುದು ಊರ ಮಂಗೆ ದೋಣಿಯಲಿಕ್ಕಾಗಿ ವಿನಃ ಹೇಳುವವನು ಅಭ್ಯಾಸವಾಡಲಿಕ್ಕಾಗಿ ಅಲ್ಲವೆಂಬುದನ್ನು ಕಾಂಗ್ರೆಸ್ಸಿನ ಅಧ್ಯಕ್ಷ ಶಿರೋಮಣಿ ಕಾಮರಾಜ ನಾಡಾರವರಿಂದ ಸ್ಪಷ್ಟಪಡಿಸಿದ್ದಾರೆ. — ಶಿವಶಂಕರ್

ಆಶೋಕ ಏಜೆನೀಸ್

ಲ್ಯಾನ್ಸ್‌ಡೌನ್ ಬಿಲ್ಡಿಂಗ್ಸ್, ಮೈಸೂರು

ಎಲ್ಲ ವಿಧದ ಆಯುರ್ವೇದ ಔಷಧಗಳೂ ನಮ್ಮಲ್ಲಿ ದೊರೆಯುತ್ತವೆ

ರೋಗಿಗಳಿಗೆ ಸೂಕ್ತ ಔಷಧಿ ಕೊಡಲಾಗುತ್ತದೆ

Quality Printi g — Neat Binding

Lakshminarasimha Press

Sivarampet, Mysore

Help The Gorakshana

ಶ್ರೀ ದ್ವಾರಕಾ ಜಗದ್ಗುರು ಮಹಾಸ್ವಾಮಿಗಳವರು ಶ್ರೀ ಶೃಂಗೇರಿ ಜಗದ್ಗುರು ಮಹಾಸ್ವಾಮಿಗಳವರು ಉದಾರ ಅನುಗ್ರಹ ಕೃಪೆಯಾಗಿಬಿ

ಗೋರಕ್ಷಣೆಗೆ ಬೆಂಬಲ ನೀಡಿ

ಕರ್ನಾಟಕದಲ್ಲಿ ಗೋರಕ್ಷಣೆ ಪ್ರಾಣಿದಯೆ, ತಾಜಾಹಾರ, ಪಶುವೈದ್ಯ ವಿಚಾರಗಳನ್ನು ತಿಳಿಸಿದ ಏಕೈಕ ಪ್ರಚಾರ ಮಾಸಪತ್ರಿಕೆ : ವಾರ್ಷಿಕ ಚಂದ 50 ನ್ಯೆ ಪೈ.

ಸಹಾಯಕರು ರೂ 10, ಪೋಷಕರು ರೂ 25 : (ಒಂದು ಸಾರಿ ಮಾತ್ರ)

ಗೋರಕ್ಷಣೆಗೆ ಲೇಖನಗಳನ್ನೂ ಪ್ರೋತ್ಸಾಹ ಧನವನ್ನೂ ವಂದನಾಪೂರ್ವಕವಾಗಿ ಸ್ವೀಕರಿಸಲಾಗುವುದು

ವಿಳಾಸ— ಗೋರಕ್ಷಣ ಆಫೀಸು, ಚಾಮರಾಜಪುರಂ, ಮೈಸೂರು 4

ವುಡ್‌ಲ್ಯಾಂಡ್ಸ್ 30-7-65 ರಿಂದ

ಅನೋಫ್ ಆರಂಭ

ಜಾಕುಲ್ ಮುಖರ್ಜಿ — ರಾಜಶ್ರೀಯವರ ಕಲಾತ್ಮಕ ಅಭಿನಯದಿಂದ ಕೂಡಿದ

.... ಚಿತ್ತಾಕರ್ಷಕ ಹಿಂದಿ ಚಿತ್ರಾಂತ್ಯ ....

ಜೀ ಚಾಹ್‌ತಾ ಹೈ

★ Ji Chahta Hai ★

ಸಂಗೀತ : ಕಲ್ಯಾಣಜೀ ಆನಂದಜೀ — [ಪ್ರತಿ ದಿನ 3 ಪ್ರದರ್ಶನಗಳು

ಅಪೆರ— 30—7—65 ರಿಂದ

ದೊರಕಿತೆ ದೊಂಗಲು (ತೆಲುಗು)

ನಟವರ್ಗ— ಎಸ್ ಟಿ ರಾಮಾರಾವ್, ಕಾಂತಾರಾವ್, ರಾಜಶ್ರೀ, ರಾಜಲಕ್ಷ್ಮಿ ಜಮುನಾ, ಗುಮ್ಮಡಿ, ರಮಣರೆಡ್ಡಿ, ನಾಗಯ್ಯ

ತೆಲುಗು ಪತ್ತೇದಾರಿ ಚಿತ್ರ] [ಪ್ರತಿ ದಿನ 3 ಆಟಗಳು

SHAKTI SUDHA

A Superb Tonic

Protect the Cow



ಗೋಸಂರಕ್ಷಣೆ ಮತ್ತು ಪ್ರಾಣಿದಯಾ ಕಾರ್ಯಗಳು ಹೆಚ್ಚಿಚ್ಚಾಗಿ ನಡೆಯಲಿ

Edited, Printed & Published by Dharma pracharo niratha M S Krishna Rao (Proprietor) at the Satyavadi Press Chamarajapuram, Mysore 4